ನದಿ ನೆರೆ ಹಾವಳಿ ಬಂದಾಗ ಈ ಜಮೀನಿನಲ್ಲಿ ಪ್ರವಾಹವು ಉಂಟಾಗುವುದು ಹೀಗಿದ್ದು ಇಲ್ಲಿಯ ಮನೆಗಳನ್ನು ನಿರ್ಮಿಸುವ ಕ್ರಮ ಸರಿಯೆ (ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ರಾಮದುರ್ಗ ತಾಲ್ಲೂಕಿನಲ್ಲಿ ಮನೆಗಳ ನಿರ್ಮಾಣಕ್ಕಾಗಿ ಜಮೀನಿನ ದರವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಭೂ ಖರೀದಿ ಸಮಿತಿಯಲ್ಲಿ ಜಮೀನಿನ ಮಾಲೀಕರೊಡನೆ ಸಂಧಾನ ಮಾಡಿ ಬೆಲೆ ನಿಗಧಿಪಡಿಸಿದ ನಂತರ, ಕರ್ನಾಟಕ ಗೃಹ ಮಂಡಳಿಯ ಸಭೆಯನ್ನು ಸದರಿ ಬೆಲೆಯನ್ನು ಅಂಗೀಕರಿಸಿದ ನಂತರ ಸದರಿ ಜಮೀನಿನ ಬೆಲೆಯನ್ನು ಸರ್ಕಾರದಿಂದ ಅನುಮೋದಿಸಲಾಗಿದೆ ಆದುದರಿಂದ ಇಲ್ಲಿ ಯಾವ ಅವ್ಯವಹಾರ ಹಾಗೂ ಅಕ್ರಮ ನಡೆದಿರುವುದಿಲ್ಲ

ಆ) ರಾಮದುರ್ಗ ಪಟ್ಟಣದ ಕಂಕಣವಾಡಿ ಗ್ರಾಮದ ಸುತ್ತಮುತ್ತಲಿನ ಜಮೀನಿನ ಮಾರುಕಟ್ಟೆ ಬೆಲೆ ಸರ್ಕಾರದಿಂದ 2001–2002 ರಲ್ಲಿ ನಿಗದಿಯಾಗಿರುತ್ತದೆ 2005–2006 ರಲ್ಲಿ ಬೆಲೆ ನಿಗದಿಯಾಗಿರುವುದಿಲ್ಲ ಆದರೆ ಅಲ್ಲಿಯ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ 3 00 ಲಕ್ಷ ಹಾಗೂ ಒಳಪಟ್ಟು ಜಮೀನುಗಳಿಗೆ ಪ್ರತಿ ಎಕರೆಗೆ ರೂ 2 50 ದಿಂದ ರೂ 1 50 ಲಕ್ಷ ಇರುತ್ತದೆ ಕರ್ನಾಟಕ ಗೃಹ ಮಂಡಳಿಯಿಂದ ಖರೀದಿಸಿದ ಜಮೀನಿನ ಬೆಲೆ ಎಕರೆ 1ಕ್ಕೆ 2 80 ಲಕ್ಷಗಳಾಗಿದ್ದು ಜಮೀನು ಜಿಲ್ಲೆಯ ಮುಖ್ಯ ರಸ್ತೆಗೆ ಹೊಂದಿ ಕೊಂಡಿರುವುದರಿಂದ ಮಾರುಕಟ್ಟೆ ಬೆಲೆಗೆ ಸಮಾನಾಂತರವಾಗಿರುತ್ತದೆ

ಇ)ಕರ್ನಾಟಕ ಗೃಹ ಮಂಡಳಿಯಿಂದ ಖರೀದಿಸಿದ ಜಮೀನು ಕಪ್ಪು ಮಣ್ಣಿನಿಂದ ಕೂಡಿದ್ದು, ಹಾಗೂ ನೆರೆ ಹಾವಳಿಗೆ ಒಳಪಡುವ ಜಮೀನನ್ನು ಹೊರತುಪಡಿಸಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನನ್ನು ಮಾತ್ರ ಖರೀದಿಸಲಾಗಿದೆ ಸದರಿ ಮಣ್ಣಿನ ಮಾದರಿಯನ್ನು ಪರೀಕ್ಷಿಸಲಾಗಿ ಸೂಕ್ತ ತಾಂತ್ರಿಕ ಸಹಾಯದೊಂದಿಗೆ ವಸತಿ ಯೋಜನೆಯನ್ನು ರೂಪಿಸಬಹುದಾಗಿದೆ

565(938) ಶ್ರೀ ಯಾದವಾಡ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ಮಾನ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಹುಲುಕುಂದ ಏತ ನೀರಾವರಿ ಯೋಜನೆಯ ಕಾಮಗಾರಿ ಮಂದಗತಿಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ರೈತರ ಜಮೀನುಗಳಿಗೆ ನೀರು ಹರಿಸುವವರೆಗೂ ಸರ್ಕಾರ ನಿರ್ದಿಷ್ಟಪಡಿಸಿದ ಕಾಲಮಿತಿ ಎಷ್ಟು?

ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ನೀಡಿದ ಕಾಲಮಿತಿ ಎಷ್ಟು?

ಇ) ಈ ಕಾಮಗಾರಿಯು ಮಂದಗತಿಯಲ್ಲಿ ನಡೆಯಲು ಕಾರಣಗಳೇನು (ವಿವರ ನೀಡುವುದು)?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ನಿಗದಿ ಪಡಿಸಿದಂತೆ ಯೋಜನೆಯು ಪ್ರಗತಿಯಲ್ಲಿದೆ

ಆ) ಶ್ರೀರಾಮೇಶ್ವರ ಏತ ನೀರಾವರಿ ಯೋಜನೆಯನ್ನು 2008–09ರ ಸಾಲಿನ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ಶ್ರೀರಾಮೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ನೀರೆತ್ತುವ ಘಟಕ ಹಾಗೂ ಕಾಲುವೆ ಜಾಲದ ನಿರ್ಮಾಣದ ಕಾಮಗಾರಿ ಒಳಗೊಂಡಿರುತ್ತದೆ

ನೀರೆತ್ತುವ ಘಟಕದ ಕಾಮಗಾರಿ

ಈ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ನೀಡಿದ ಕಾಲಮಿತಿ 18 ತಿಂಗಳು (ದಿನಾಂಕ 9 9 05 ರಂದು ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ) ಅದರಂತೆ, ಗುತ್ತಿಗೆ ಅವಧಿಯು ಮಾರ್ಚ್ 2007ಕ್ಕೆ ಕೊನೆಗೊಳ್ಳುತ್ತದೆ

ಕಾಲುವೆ ಜಾಲದ ಕಾಮಗಾರಿ

ಸದರಿ ಯೋಜನೆಯ ಕಾಲುವೆ ಜಾಲದ ಸರ್ವೆ, ಅನ್ವೇಷಣೆ, ವಿನ್ಯಾಸ, ರಚನೆ, ಅಂದಾಜು ಪತ್ರಿಕೆ ತಯಾರಿಕೆಗೆ ಕನ್ಸ್‌ಲ್‌ಟೆಂಟ್ ನೇಮಿಸಲು ಟೆಂಡರ್ ಕರೆಯಲಾಗಿದ್ದು, ಮೇ 2007ರ ವೇಳೆಗೆ ಈ ಕಾರ್ಯಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ

ಇ) ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿಲ್ಲ ಡಿಸೆಂಬರ್ 2006ರ ಅಂತ್ಯಕ್ಕೆ ರೂ 5 00 ಕೋಟಿಗಳ ಆರ್ಥಿಕ ಗುರಿ ಇದ್ದು, ಸದರಿ ತಿಂಗಳ ಅಂತ್ಯಕ್ಕೆ ಸುಮಾರು ರೂ 11 00 ಕೋಟಿಯಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ